**ಪಿಡಬ್ಲ್ಯು - 8**

**ಅರ್ಜಿಯ ಆದೇಶದ ಮೇರೆಗೆ, ಪಿಡಬ್ಲ್ಯು-8 ಸವಿತಾ ರವರನ್ನು ರೂ. 300/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 20.09.2023**

## ಪಾಟಿ ಸವಾಲುಃ ಶ್ರೀ ಐ.ಎ. ಬೇಪಾರಿ, ಆರೋಪಿತರ ಪರ ವಕೀಲರಿಂದಃ

4. ನಾನು ಬೊಮ್ಮಸಾಗರದಲ್ಲಿ ವಾಸ ಮಾಡಿಕೊಂಡಿರುತ್ತೇನೆ. ಸದರಿ ಮೃತ ನೀಲವ್ವಳ ತಂದೆಯ ಹೆಸರು ಶಿವಪ್ಪ ಇರುತ್ತದೆ. ಸದರಿ ಶಿವಪ್ಪ ಇವರಿಗೆ ಮೃತ ನೀಲವ್ವ ಮಾತ್ರ ಒಬ್ಬಳೇ ಮಗಳಾಗಿದ್ದಳು. ಸದರಿ ಶಿವಪ್ಪನಿಗೆ ಸುಮಾರು 28 ಎಕರೆ ಚಿಲ್ರೆ ಗುಂಟೆ ಜಮೀನು ಇತ್ತು. ಅವುಗಳ ಸರ್ವೆ ನಂಬರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಶಿವಪ್ಪ ತೀರಿಕೊಂಡ ನಂತರ ಆತನ ಜಮೀನುಗಳ ಉತಾರಗಳಲ್ಲಿ ಯಾರ ಹೆಸರು ನಮೂದು ಆಗಿರುತ್ತದೆ ಎಂದು ನಾನು ನೋಡಿರುವುದಿಲ್ಲ.

5. ಮೃತ ನೀಲವ್ವ ತೀರಕೊಳ್ಳುವ ಸಮಯದಲ್ಲಿ ಆಕೆಯ ಹೆಸರಿನಲ್ಲಿ ಯಾವುದೇ ಜಮೀನು ಇರಲಿಲ್ಲ. ಸದರಿ ಶಿವಪ್ಪನು ಮೃತ ನೀಲವ್ವ ಹಾಗೂ ಆಕೆಯ ಗಂಡನ ವಿರುದ್ಧ ಮೂಲ ದಾವೆ ನಂ. 205/1991 ನ್ನು ರೋಣದ ದಿವಾಣಿ ನ್ಯಾಯಾಲಯದಲ್ಲಿ ಶಾಶ್ವತ ತಡೆಯಾಜ್ಞೆಗಾಗಿ ದಾವೆಯನ್ನು ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಶಿವಪ್ಪ, ಮೃತ ನೀಲವ್ವ ಹಾಗೂ ಆಕೆಯ ಗಂಡ ಮೂಲ ದಾವೆ ನಂ. 205/1991 ನ್ನು ರಾಜಿ ಮಾಡಿಕೊಂಡಿದ್ದು, ಅದರ ಪ್ರಕಾರ ಮೃತ ನೀಲವ್ವ ಮತ್ತು ಆಕೆಯ ಗಂಡ ಸದರಿ ಮೂಲ ದಾವಾ ಆಸ್ತಿಯಲ್ಲಿ ತಕರಾರು ಮಾಡುವುದಿಲ್ಲ ಎಂದು ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ಸದರಿ ಶಿವಪ್ಪನು 1 ನೇ ಆರೋಪಿಯನ್ನು 1991 ರಲ್ಲಿ ದತ್ತಕಕ್ಕೆ ತೆಗೆದುಕೊಂಡಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಮೂಲ ದಾವೆ ನಂ. 205/1991 ರ ರಾಜಿಯಲ್ಲಿ 1 ನೇ ಆರೋಪಿಯನ್ನು ದತ್ತಕಕ್ಕೆ ತೆಗೆದುಕೊಂಡ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

7. ಸದರಿ ಶಿವಪ್ಪ ತೀರಿಕೊಂಡು ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿ ಶಿವಪ್ಪ ತೀರಿಕೊಳ್ಳುವವರೆಗೂ ಆತನೇ ತನ್ನ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಪ್ಪ ತೀರಿಕೊಂಡ ನಂತರದಿಂದ ಆತನ ಜಮೀನನ್ನು 1 ನೇ ಆರೋಪಿಯೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

8. ನನ್ನ ಮದುವೆಯು 2016 ರಲ್ಲಿ ಆಗಿರುತ್ತದೆ. ಮೃತ ಶಿವಪ್ಪ ತೀರಿಕೊಂಡು 7 ವರ್ಷಗಳಾಗಿರುತ್ತವೆ ಎಂದರೆ ಸರಿ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1991 ರಲ್ಲಿಯೇ ಶಿವಪ್ಪನ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಜಗಳ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಪ್ಪ ತೀರಿಕೊಂಡ ನಂತರದಿಂದ 1 ನೇ ಆರೋಪಿಯೇ ಆತನ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ಸಾಕ್ಷಿಯು ಮೃತ ನೀಲವ್ವ ಅದಕ್ಕೆ ತಕರಾರು ಮಾಡಿರುತ್ತಾಳೆ ಎಂದು ಹೇಳಿರುತ್ತಾರೆ.

9. ದತ್ತಕದಿಂದ 1 ನೇ ಆರೋಪಿಯೇ ಸದರಿ ಶಿವಪ್ಪನ ಎಲ್ಲಾ ಆಸ್ತಿಗಳಿಗೆ ಮಾಲೀಕನಾಗಿರುತ್ತಾನೆ ಎಂದರೆ ಸಾಕ್ಷಿಯು ದತ್ತಕ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಶಿವಪ್ಪನ ಎಲ್ಲಾ ಆಸ್ತಿಗಳನ್ನು 1 ನೇ ಆರೋಪಿಯೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ ಮತ್ತು ಮೃತ ನೀಲವ್ವ ಯಾವತ್ತೂ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

10. ಘಟನೆಯು ದಿಃ 07.07.2017 ರಂದು ಆಗಿರುತ್ತದೆ. ಘಟನೆ ನಡೆದಾಗ ನಾನು ಮನೆಯಲ್ಲಿ ಇದ್ದೆನು. ಮೃತ ನೀಲವ್ವಳನ್ನು ಕೊಡ್ಲಿಯನ್ನು ಕಡಿಯಲಾಗಿರುತ್ತದೆ ಎಂದು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಾನು ಟ್ರ್ಯಾಕ್ಟರ ಶಬ್ದ ಕೇಳಿ ಹೋಗಿರುತ್ತೇನೆ ಎಂದು ಹೇಳಿರುತ್ತಾರೆ. ಮೃತ ನೀಲವ್ವ ಹೋದ 5 ನಿಮಿಷಕ್ಕೆ ನಾನೂ ಕೂಡಾ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಎಷ್ಟು ಗಂಟೆಗೆ ಹೋದೆನು ಎಂದು ಹೇಳಲು ಆಗುವುದಿಲ್ಲ. ಆದರೆ ಘಟನೆಯು ಬೆಳಿಗ್ಗೆ 09.30 ಗಂಟೆಗೆ ನಡೆದಿರುತ್ತದೆ. ನಮ್ಮ ಮನೆಯಲ್ಲಿ ಇರುವವರೆಲ್ಲರೂ ಸೇರಿ ಸ್ಥಳಕ್ಕೆ ಹೋಗಿರುತ್ತೇವೆ. ಘಟನೆ ನಡೆದಿದೆ ಎಂದು ಹೇಳಲಾದ ಎಷ್ಟು ಗಂಟೆಗೆ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ನಾನು ಸ್ಥಳದಲ್ಲಿಯೇ ಇದ್ದೆನು ಎಂದು ಹೇಳಿರುತ್ತಾರೆ. ಆಗ ನನ್ನ ಜೊತೆಗೆ ನನ್ನ ಗಂಡ, ಫಾಸಾ-7, ಫಾಸಾ-1 ರವರು ಇದ್ದರು.

**(ಈ ಹಂತದಲ್ಲಿ, ವಕೀಲರು ಮುಂದಿನ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಮುಂದುವರೆದ ಪಾಟಿ ಸವಾಲನ್ನು ರೂ. 300/- ಗಳ ಖರ್ಚಿನ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**